ನಿಪ್ಪಾಣಿ ಪಟ್ಟಣಕ್ಕೆ ನೀರು ಸರಬರಾಜು

೧೨೮೭. ಶ್ರೀ ಸುಭಾಷ್ ಜೋಶಿ (ನಿಪ್ಪಾಣಿ).— ಮಾನ್ಯ ಬಂದರು, ಮೀನುಗಾರಿಕೆ ಹಾಗೂ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

(ಅ) ನಿಪ್ಪಾಣಿ ನೀರು ಸರಬರಾಜು ಯೋಜನೆ ಮಂಜೂರಾಗಿದೆಯೇ.

(ಆ) ಹಾಗಿದ್ದಲ್ಲಿ ಯಾವಾಗ ಪ್ರಾರಂಭಿಸಲಾಗುವುದು.

(ಇ) ಇದಕ್ಕೆ ಬೇಕಾದ ಹಣವನ್ನು ನಿಪ್ಪಾಣಿ ನಗರಸಭೆ ಒದಗಿಸಿದೆಯೆ.

(ಈ) ಹಳಸಿದ್ದನಾಥ ಸಕ್ಕರೆ ಕಾರ್ಖಾನೆಯು ನಗರಸಭೆ ನಿಪ್ಪಾಣಿ ಜೊತೆಗೆ ಪಾಲುದಾರರಾಗಲು ಒಪ್ಪಿರುತ್ತಾರೆಯೊ.

(ಉ) ಹಾಗಿದ್ದಲ್ಲಿ ಆ ಹಣವನ್ನು ಸಕ್ಕರೆ ಕಾರ್ಖಾನೆಯವರು ಪಾವತಿ ಮಾಡಿರುವರೆ ?

ಶ್ರೀ ಟಿ. ಎನ್. ನರಸಿಂಹಮೂರ್ತಿ (ಬಂದರು, ಮೀನುಗಾರಿಕೆ ಹಾಗೂ ವಸತಿ ಮತ್ತು.— ನಗರಾಭಿವೃದ್ಧಿ ಸಚಿವರು).—

(ಅ) ಹೌದು

(ಆ) ಜೀವವಿಮಾ ನಿಗಮದಿಂದ ಸಾಲ ಪಡೆಯಲು ಕ್ರಮ ತೆಗೆದುಕೊಂಡಿದೆ ಮತ್ತು ಹಣ ಬಿಡುಗಡೆಯಾದ ನಂತರ ಕೆಲಸವನ್ನು ಪ್ರಾರಂಭಿಸಲಾಗುವುದು.

(ಇ) ಪುರಸಭೆಯ ಪಾಲಿನ ರೂ. ೩೩ ಲಕ್ಷ ಪೈಕಿ ರೂ. ೧೦ ಲಕ್ಷ ಮಾತ್ರ ಪುರಸಭೆಯವರು ಪಾವತಿ ಮಾಡಿದ್ದಾರೆ.

(ಈ) ಇನ್ನೂ ಒಪ್ಪಿಲ್ಲ

(ಉ) ಇಲ್ಲ

ಚಿಕ್ಕೋಡಿ ಟೌನ್‌ಗೆ ನೀರು ಸರಬರಾಜು

೧೨೮೮. ಶ್ರೀ ಸುಭಾಷ್ ಜೋಶಿ (ನಿಪ್ಪಾಣಿ).— ಮಾನ್ಯ ಬಂದರು, ಮೀನುಗಾರಿಕೆ, ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

(ಅ) ಚಿಕ್ಕೋಡಿ ಪಟ್ಟಣದ ನೀರು ಸರಬರಾಜು ಯೋಜನೆಗೆ ಮಂಜೂರಾತಿ ದೊರೆತಿದೆಯೇ.

(ಆ) ಹಾಗಾದರೆ, ಸರ್ಕಾರದ ಚಿಕ್ಕೋಡಿ ಪುರಸಭೆಗೆ ಬೇಕಾದ ಹಣವನ್ನು ಒದಗಿಸಿದೆಯೇ.

(ಇ) ಇಲ್ಲವಾದರೆ, ಯಾವಾಗ ಹಣವನ್ನು ಒದಗಿಸಲಾಗುವುದು ?

ಶ್ರೀ ಟಿ. ಎನ್. ನರಸಿಂಹಮೂರ್ತಿ (ಬಂದರು, ಮೀನುಗಾರಿಕೆ ಹಾಗೂ ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

(ಅ) ದೊರೆತಿದೆ.

(ಆ) ಈ ಯೋಜನೆಗೆ ಸರ್ಕಾರದ ಪಾಲಿನ ಹಣವಿರುವುದಿಲ್ಲ.

(ಇ) ಉದ್ಭವಿಸುವುದಿಲ್ಲ.